ಕ್ರಿ.ಮಿಸ್.ನಂ.*449-2016*
ಪಿ.ಡಬ್ಲ್ಯೂ-*1.*

**ದಿಃ 10-08-2018 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀಸವಾಲುಃ ಎದುರುದಾರರ ಪರ ಶ್ರೀ ಎಂ.ಕೆ.ಜಿ ವಕೀಲರವರಿಂದ**

ನಾನು ಎಸ್.ಎಸ್.ಎಲ್.ಸಿ ವರೆಗೆ ವ್ಯಾಸಂಗ ಮಾಡಿರುತ್ತೇನೆ. ನಾನು ಸಂರಕ್ಷಣಾಧಿಕಾರಿಗೆ ನೀಡಿರುವ ದೂರು ಮತ್ತು ಕೆಂಗೇರಿ ಪೊಲೀಸ್ ಠಾಣಾಧಿಕಾರಿಗೆ ನೀಡಿರುವ ದೂರು ಒಂದಕ್ಕೊಂದು ದೂರು ಸ್ವಾಮ್ಯತೆ ಇರುತ್ತದೆ. ನಾನು ನ್ಯಾಯಾಲಯದಲ್ಲಿ ನೀಡಿರುವ ಸಾಕ್ಷ್ಯ ಮತ್ತು ಸಂರಕ್ಷಣಾಧಿಕಾರಿಗೆ ನೀಡಿರುವ ಮಾಹಿತಿ ಒಂದಕ್ಕೊಂದು ಪೂರಕವಾಗಿರುತ್ತದೆ. ನಾನು ಕೆಂಗೇರಿಯ ಪೊಲೀಸರಿಗೆ ದೂರನ್ನು ನೀಡುವ ಕಾಲಕ್ಕೆ ನನ್ನ ಮೇಲೆ ಹಲ್ಲೆ ನಡೆದ ಹಿನ್ನಲೆಯಲ್ಲಿ ಬರೆಯುವಂತಹ ಪರಿಸ್ಥಿತಿಯಲ್ಲಿ ಇರಲಿಲ್ಲ ಹಾಗಾಗಿ ನಾನು ಹೇಳಿದ್ದನ್ನು ಅಲ್ಲಿನ ಪೊಲೀಸರು ಬರೆದುಕೊಂಡಿರುತ್ತಾರೆ. ನಾನು ಕೆಂಗೇರಿಯಲ್ಲಿ ಹೇಳಿರುವ ದೂರು ಹಾಗೂ ನ್ಯಾಯಾಲಯದಲ್ಲಿ ಹೇಳಿರುವ ಸಾಕ್ಷ್ಯದಲ್ಲಿ ಸ್ವಾಮ್ಯತೆ ಇಲ್ಲ ಎಂದರೆ ಸರಿಯಲ್ಲ. ಅಂತೆಯೇ ನಾನು ಸಂರಕ್ಷಣಾಧಿಕಾರಿಗಳ ಸಮಕ್ಷಮ ಹೇಳಿರುವ ಹೇಳಿಕೆ ಹಾಗೂ ನ್ಯಾಯಾಲಯದಲ್ಲಿ ಹೇಳಿರುವ ಸಾಕ್ಷ್ಯದಲ್ಲಿ ಸ್ವಾಮ್ಯತೆ ಇಲ್ಲ ಎಂದರೆ ಸರಿಯಲ್ಲ.

*2.* ನನ್ನ ತಂದೆ ತಾಯಿಗೆ ನಾನೂ ಸೇರಿದಂತೆ *3* ಮಂದಿ ಮಕ್ಕಳು ಇದ್ದೇವೆ. ನಾನು ನನ್ನ ಸಹೋದರಿ ಹೆಣ್ಣು ಮಕ್ಕಳಾಗಿದ್ದು ನಮಗೆ ಒಬ್ಬ ಸಹೋದರ ಇದ್ದಾನೆ. ನನ್ನ ಅಕ್ಕ ಅನಾರೋಗ್ಯದ ಕಾರಣ ಮೃತಪಟ್ಟಿರುತ್ತಾರೆ. ನನ್ನ ಅಕ್ಕನನ್ನು ಹೊಸದುರ್ಗದ ಬಳಿ ಕಾಲತಬಲ ಗ್ರಾಮಕ್ಕೆ ವಿವಾಹ ಮಾಡಿಕೊಟ್ಟಿದ್ದರು. ನನ್ನ ಸಹೋದರಿಗೆ ಇಬ್ಬರು ಮಕ್ಕಳಿದ್ದಾರೆ. ನನ್ನ ಸಹೋದರಿಯ ಮಕ್ಕಳು ಇನ್ನು ಚಿಕ್ಕಮಕ್ಕಳು ಅಗಿರುವ ಕಾರಣ ಅವರನ್ನು ನನ್ನ ತಂದೆತಾಯಿಯೇ ಸಾಕುತ್ತಿದ್ದಾರೆ. ನನ್ನ ಸಹೋದರಿ ಸುಮಾರು *3-4* ವರ್ಷಗಳ ಹಿಂದೆ ಮೃತಪಟ್ಟಿರುತ್ತಾರೆ. ನನ್ನ ಸಹೋದರಿಯ ಸಾವಿನ ಕುರಿತಾಗಿ ಒಂದು ದೂರು ದಾಖಲಾಗಿರುತ್ತದೆ ಎಂದರೆ ಸಾಕ್ಷಿ ಇರಬಹುದು ಎಂದು ನುಡಿಯುತ್ತಾರೆ. ನನ್ನ ಸಹೋದರಿಯು ಕೌಟುಂಬಿಕ ಕಾರಣದಿಂದ ಮತ್ತು ಅನಾರೋಗ್ಯದ ಕಾರಣದಿಂದ

ಮೃತಪಟ್ಟಿರುತ್ತಾರೆ. ನನ್ನ ಸಹೋದರಿಯ ಮಕ್ಕಳನ್ನು ನನ್ನ ತಂದೆ ತಾಯಿ ನೋಡಿಕೊಳ್ಳುತ್ತಿದ್ದು ನಾನು ನನ್ನ ತಂದೆ ತಾಯಿಯ ಆಶ್ರಯದಲ್ಲಿರುವ ಕಾರಣ ನಾನೂ ಕೂಡ ಮಕ್ಕಳನ್ನು ನೋಡಿಕೊಳ್ಳುತ್ತೇನೆ. ನನ್ನ ಭಾವ ಮತ್ತೊಂದು ವಿವಾಹ ಆಗಿದ್ದು ಹಾಗಾಗಿ ನನ್ನ ಸಹೋದರಿಯ ಮಕ್ಕಳನ್ನು ನೋಡಲು ಬರುವುದಿಲ್ಲ.

**ಈ ಹಂತದಲ್ಲಿ ಎದುರುದಾರರ ಪರ ವಕೀಲರು *1* ನೇ ಎದುರುದಾರನು ಅರ್ಜಿದಾರರ ಕುಟುಂಬದವರ ವಿರುದ್ದ ನೀಡಿರುವ ದೂರಿನ ಕುರಿತಾದ ಕೆಲವೊಂದು ಸಂಗತಿಗಳನ್ನು ಪ್ರಶ್ನಿಸುವ ಕುರಿತು ಹೇಳಿದ್ದು ಹಾಗಾಗಿ ನ್ಯಾಯಾಲಯದ ಆವರಣದಿಂದ ಎಲ್ಲಾ ಕಕ್ಷಿದಾರರನ್ನು ಮತ್ತು ವಕೀಲರನ್ನು ಹೊರಗೆ ಕಳಿಸಿ ಸಾಕ್ಷ್ಯವನ್ನು ದಾಖಲು ಮಾಡಲಾಯಿತು.**

*3.* ನಾನು ನನ್ನ ಯಜಮಾನರಾದ *1* ನೇ ಎದುರುದಾರನಿಗೆ ನನ್ನ ಅಕ್ಕನ ಮಕ್ಕಳನ್ನು ದತ್ತು ತೆಗೆದುಕೊಳ್ಳೋಣ ಎಂದು ಹೇಳಿರುತ್ತೇನೆ ಎಂದರೆ ಸರಿಯಲ್ಲ. ಈ ವಿಚಾರದ ಕುರಿತು ನನ್ನ ಮತ್ತು ನನ್ನ ಯಜಮಾನರ ನಡುವೆ ಗಲಾಟೆ ಆಗಿರುತ್ತದೆ ಎಂದರೆ ಸರಿಯಲ್ಲ. ಆ ಕಾರಣದಿಂದ ನಾನು ನನ್ನ ಯಜಮಾನರನ್ನು ಮುಟ್ಟಿಸಿಕೊಳ್ಳುತ್ತಿರಲಿಲ್ಲ ಹಾಗೂ ಅವರನ್ನು ಅವಾಚ್ಯವಾಗಿ ನಿಂದಿಸುತ್ತಿದ್ದೆ ಎಂದರೆ ಸರಿಯಲ್ಲ. ನಾನು ನನ್ನ ಯಜಮಾನರು ಕೆಲಸದಿಂದ ಆಯಾಸಗೊಂಡು ಬಂದಾಗ, ಅವರಿಗೆ ಊಟ ಬಡಿಸುತ್ತಿರಲಿಲ್ಲ ಎಂದರೆ ಸಾಕ್ಷಿ ನನಗೆ ಎದುರುದಾರರ ಮನೆಯಲ್ಲಿ ಊಟ ಬಡಿಸುವಂತಹ ಸ್ವಾತಂತ್ರ್ಯ ಇರಲಿಲ್ಲವೆಂದು ಹೇಳುತ್ತಾರೆ. ಎದುರುದಾರು ನನ್ನನ್ನು ವಿವಾಹವಾದ ಮೊದಲ ಒಂದು ತಿಂಗಳ ಕಾಲ ಚೆನ್ನಾಗಿ ನೋಡಿಕೊಂಡಿರುತ್ತಾರೆ. ಸದರಿ ಸಮಯದಲ್ಲಿ ನಾನು ನನ್ನ ತಂದೆಯ ಮನೆಗೆ ಒಮ್ಮೆಯೂ ಕೂಡ ಬಂದಿಲ್ಲ. ನನ್ನನ್ನು ನನ್ನ ಗಂಡ ಬೆಂಗಳೂರಿನಲ್ಲಿ ಎಲ್ಲಿಯೂ ಕೂಡ ಶಾಪಿಂಗ್ ಗೆ ಕರೆದುಕೊಂಡು ಹೋಗಿರಲಿಲ್ಲ. ಎದುರುದಾರರ ಕುಟುಂಬದವರು ನನ್ನನ್ನು ಸೇರಿದಂತೆ ನನ್ನ ಯಜಮಾನರು ಹಾಗೂ ಯಜಮಾನರ ತಂಗಿಯನ್ನು ಮಹದೇಶ್ವರ ಬೆಟ್ಟಕ್ಕೆ ಕರೆದುಕೊಂಡು ಹೋಗಿದ್ದು ಅಲ್ಲಿ ನನ್ನ ಯಜಮಾನರ ಸಹೋದರಿ ಹಾಗೂ ನನ್ನ ಯಜಮಾನರು ಗಲಾಟೆ ಮಾಡಿಕೊಂಡಿರುತ್ತಾರೆ ಆದರೆ ನನ್ನ ವಿಚಾರವಾಗಿ ಯಾವುದೇ ಜಗಳ ಮಾಡಿಕೊಂಡಿರುವುದಿಲ್ಲ. ಸದರಿ ಬೆಟ್ಟದಲ್ಲಿ ನಾನು ನನ್ನ ಯಜಮಾನರು ಜೊತೆಯಲ್ಲಿ ಪೋಟೋ ತೆಗೆಸಿಕೊಳ್ಳುತ್ತಿದ್ದೆವು ನನ್ನ ಯಜಮಾನರ

ಸಹೋದರಿ ನನ್ನನ್ನು ಜೊತೆಯಲ್ಲಿ ನಿಲ್ಲಿಸಿಕೊಂಡಿಲ್ಲ ಎಂದು ಜಗಳ ತೆಗೆದು ಅಲ್ಲಿಂದ ಪ್ರಾರಂಭವಾದ ಜಗಳ ಮುಂದುವರೆಯುತ್ತಾ ಹೋಗಿರುತ್ತದೆ.

**ಮುಂದುವರೆದ ಪಾಟೀಸವಾಲಿಗಾಗಿ ಕಾಲಾವಕಾಶ ನೀಡಲಾಯಿತು.**

***(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)***

***ಓ. ಕೇ. ಸ. ಇ. ಎ. ಒ.***

***ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು***
***ಪ್ರ.ದ.ನ್ಯಾ.ದಂ. ರವರು, ತರೀಕೆರೆ.***